# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 544 |
| 2. ಸದಸ್ಯರ ಹೆಸರು | : ಶ್ರೀ ಪಿ. ಹೆಚ್. ಪೂಜಾರ್, |
| 3. ಉತ್ತರಿಸಬೇಕಾದ ದಿನಾಂಕ | : 14.08.2025. |
| 4. ಉತ್ತರಿಸುವ ಸಚಿವರು | : ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಾಗಲಕೋಟೆ ಜಿಲ್ಲೆಯ ಗುಳೇದ ಗುಡ್ಡ ತಾಲ್ಲೂಕು ವ್ಯಾಪ್ತಿಯ ಹಳ್ಳಿಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ 2010ರಲ್ಲಿ ಜಾರಿಯಾದ ಇಂಜಿನವಾರಿ ಏತ ನೀರಾವರಿ ಯೋಜನೆಯು ಕಳೆದ 6-7 ವರ್ಷಗಳಿಂದ ನೀರೆತ್ತುವ ಅವಶ್ಯಕ ಪಂಪ್‌ಸೆಟ್‌ಗಳು ಕೆಟ್ಟು ಹೋದ ಕಾರಣ ಮತ್ತು ಕಾಲುವೆಗಳಲ್ಲಿ ಹೂಳು ತುಂಬಿ ಗಿಡಗಂಟಿ ಬೆಳೆದು ಸಮರ್ಪಕ ನಿರ್ವಹಣೆ ಇಲ್ಲದೇ, ಕಾಲುವೆಗೆ ನೀರು ಹರಿಯದೇ ರೈತರ ಜಮೀನುಗಳಿಗೆ ನೀರುದೊರೆಯದೇ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿದೆ. |
| ಆ | ಬಂದಿದ್ದಲ್ಲಿ, ಕೂಡಲೇ ಪ್ರಸ್ತುತ ವರ್ಷದಲ್ಲಿ ತುರ್ತು ಹಣ ಬಿಡುಗಡೆ ಮಾಡಿ, ರೈತರ ಜಮೀನುಗಳಿಗೆ ನೀರಿನ ಸೌಲಭ್ಯ ಒದಗಿಸಲಾಗುವುದೇ ತಿಳಿಸುವುದು? | ಬಾಗಲಕೋಟೆ ಜಿಲ್ಲೆಯ ಗುಳೇದ ಗುಡ್ಡ ತಾಲ್ಲೂಕಿನ ಇಂಜಿನವಾರಿ ಏತ ನೀರಾವರಿ ಯೋಜನೆಯ ಪಂಪ್‌ಸೆಟ್‌ಗಳು ದುರಸ್ತಿಯಲ್ಲಿರುವುದರಿಂದ, ವಿದ್ಯುತ್ ಪರಿವರ್ತಕ ಇಲ್ಲದಿರುವುದರಿಂದ ಹಾಗೂ ಕಾಲುವೆಗಳಲ್ಲಿ ಹೂಳು ತುಂಬಿರುವುದರಿಂದ ಯೋಜನೆಯು ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ.<br><br>ಪ್ರಸಕ್ತ ಸಾಲಿನಲ್ಲಿ 2702 ಯೋಜನೇತರ ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನದಲ್ಲಿ ಸದರಿ ಯೋಜನೆಯ ನಿರ್ವಹಣೆಯ ಭಾಗವಾಗಿ ಜಾಕ್‌ವೆಲ್ ಸುತ್ತ ಮುತ್ತಲಿನ ಗಿಡಗಂಟೆ ಮತ್ತು ಹೂಳನ್ನು ತೆಗೆಯಲಾಗುವುದು.<br><br>ಸದರಿ ಯೋಜನೆಗೆ ಸ್ಥಳೀಯ ಅವಶ್ಯಕತೆಗಳನ್ನು ಪರಿಶೀಲಿಸಿ ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು. |

ಕಡತ ಸಂಖ್ಯೆ:MID 56 LCQ 2025

(ಎನ್.ಎಸ್. ಭೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ
ಮತ್ತು ತಂತ್ರಜ್ಞಾನ ಸಚಿವರು.